ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೈಸೂರು ಮತ್ತು ಚಾಮರಾಜನಗರದಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿ ಕೈಗಾರಿಕೆಗಳನ್ನು ನಿಲ್ಲಿಸುವ ಬಗ್ಗೆ

2280 (2753) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಈವರೆಗೆ ಎಷ್ಟು ಕಡೆ ಪರವಾನಿಗೆ ಇಲ್ಲದೆ ಅಕ್ರಮವಾಗಿ ಗಣಿ ಕೈಗಾರಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ:

ಆ) ಮೈಸೂರು ತಾಲ್ಲೂಕಿನಲ್ಲಿ ವಿಶೇಷವಾಗಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಎಷ್ಟು:

ಇ) ಈ ರೀತಿ ಅಕ್ರಮ ಗಣಿ ಕೈಗಾರಿಕೆಗಳು ಎಷ್ಟು ಎಕರೆ ಸರ್ಕಾರಿ ಮತ್ತು ಹಿಡುವಳಿ ಜಮೀನಿನಲ್ಲಿ ನಡೆಯುವುದನ್ನು ಪತ್ತೆ ಹಚ್ಚಲಾಗಿದೆ ಹಾಗೂ ಇದರಲ್ಲಿ ಒಳಗೊಂಡ ಹಣದ ಮೊತ್ತ ಎಷ್ಟು:

ಈ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ 51 ಅಕ್ರಮ ಗಣಿಗಾರಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಯಾವುದು ಇರುವುದಿಲ್ಲ.

ಆ) ಮೈಸೂರು ತಾಲ್ಲೂಕಿನಲ್ಲಿ ವಿಶೇಷವಾಗಿ 10 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಮೈಸೂರು ಜಿಲ್ಲೆಯ ಸರ್ಕಾರಿ ಭೂಮಿಯಲ್ಲಿ 4 ಗಣಿ ಕೈಗಾರಿಕೆಗಳು ಅನಧಿಕೃತವಾಗಿ ನಡೆಸಿರುವುದು, ಅವುಗಳ ವಿಸ್ತೀರ್ಣ 4 ಎಕರೆ ಮತ್ತು ಹಿಡುವಳಿ ಭೂಮಿಯಲ್ಲಿ 6 ಗಣಿಗಳನ್ನು ಪತ್ತೆ ಹಚ್ಚಿದ್ದು ಅದರ ವಿಸ್ತೀರ್ಣ 2 ಎಕರೆ 30 ಗುಂಟೆ. ಈ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು ತಕ್ಷಣ ತಡೆಗಟ್ಟುವ ಕ್ರಮ ಕೈಗೊಂಡಿರುವುದರಿಂದ ಇದರಿಂದ ಒಳಗೊಂಡ ಹಣದ ಪ್ರಮಾಣವೇನು ಇರುವುದಿಲ್ಲ.

ಈ) ಅಕ್ರಮ, ಗಣಿಗಾರಿಕೆಯನ್ನು ತಡೆಯಲು ಆಯಾ ಸ್ಥಳಗಳಿಗೆ ಭೇಟಿ ನೀಡಿ ಪೊಲೀಸ್ ಹಾಗೂ ಕಂದಾಯ ಇಲಾಖೆಯ ಸಹಾಯದೊಂದಿಗೆ ಸ್ಥಗಿತಗೊಳಿಸಲಾಗಿದೆ.

ಕರ್ನಾಟಕ ಕೈಮಗ್ಗ ನಿಗಮದ ನೇಕಾರರಿಗೆ ಸಕಾಲದಲ್ಲಿ ನೂಲನ್ನು ಸರಬರಾಜು ಮಾಡದೇ ಇರುವ ಬಗ್ಗೆ

2281 (2924) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೈಮಗ್ಗ ನೇಕಾರರಿಗೆ ಸಕಾಲದಲ್ಲಿ ನೂಲನ್ನು ಸರಬರಾಜು ಮಾಡದೆ ಮತ್ತು ಕೂಲಿಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದರೆ ಇದಕ್ಕೆ ಕಾರಣಗಳೇನು: